# ನಿಮ್ಮ ಆಹಾರದಲ್ಲಿ ವಿಷವಿದೆಯೇ?



**ಶೇ. 99 ಮಂದಿಗೆ ತಾವು ಕೈಯಾರೆ ತಂದ ಕೀಟನಾಶಕವನ್ನು ಎಷ್ಟು ನೀರಿಗೆ ಎಷ್ಟು ವಿಷ ಸೇರಿಸಬೇಕೆಂಬ ಸಮಪಾತ ಗೊತ್ತಿಲ್ಲ.**

ನಿಯಂತ್ರಿಸುತ್ತಿದೆ. ದುರಂತವೆಂದರೆ ಈ ದೇಶದ ಅನ್ನ ಉತ್ಪಾದಿಸುವ ಕಟ್ಟಕಡೆಯ ಪ್ರಜೆ, ಪಕ್ಕಾ ಗ್ರಾಮ್ಯ ರೈತನ ಅಡುಗೆ ಮನೆಗೂ ಕಾರ್ಪೊರೇಟ್ ಜಗತ್ತು ಪ್ರವೇಶಿಸುತ್ತಿರುವುದು. ಅಡುಗೆ ಮನೆಯ ಗೋಡೆ ತಗ್ಗಿಸಿ ಅಲ್ಲಿಂದಲೇ ಟಿ.ವಿ.ಯಲ್ಲಿ ಪ್ರಸಾರವಾಗುವ ಅಡುಗೆಯನ್ನು ನೋಡಿ ಒಗ್ಗರಣೆ ಹಾಕುವ ಮನಸ್ಥಿತಿ ನಗರಗಳಲ್ಲಿ ಮಾತ್ರವಲ್ಲ, ಗ್ರಾಮಗಳಲ್ಲೂ ಇದೆ. ದವಸ ಧಾನ್ಯಗಳನ್ನು ಸಂಗ್ರಹಿಸಿಡುವ, ಆಹಾರವನ್ನು ಕಾಪಿಡುವ ಹೊಗೆ ಅಟ್ಟಗಳು, ಮುಡಿ, ಕಲೆಂಬಿ, ಪತ್ತಾಯಗಳು, ಮರ–ಮಣ್ಣಿನ ಪಾತ್ರೆಗಳು ಎಲ್ಲವೂ ಮರೆಯಾಗುತ್ತಿವೆ. ಕಾರ್ಪೊರೇಟ್ ಮನಃಸ್ಥಿತಿ ನಮ್ಮ ಹಳ್ಳಿಯ ಸಾಂಪ್ರದಾಯಿಕ ಅರಿವು, ನೆಲ ಸಾಧ್ಯತೆಗಳನ್ನು ವಿಷವಿಲ್ಲದ ರುಚಿಯನ್ನು ಮರೆಸುತ್ತಿದೆ.

ಇತ್ತೀಚೆಗೆ ಕೊಪ್ಪಳ, ಗಂಗಾವತಿ, ಮಾನ್ವಿ, ರಾಯಚೂರು ಮುಂತಾದೆಡೆ ಹೋಗುವ ಅವಕಾಶ ಬಂತು. ಈ ಜಿಲ್ಲೆಗಳು ಇಡೀ ರಾಜ್ಯದಲ್ಲೇ ಅತ್ಯಂತ ಹೆಚ್ಚು ಭತ್ತ, ಸೋನಾ ಮಸೂರಿಯನ್ನು ಬೆಳೆಯುವ ಭೂಭಾಗಗಳು. ಆಂಧ್ರದ ರೆಡ್ಡಿಗಳು ಇಲ್ಲೆಲ್ಲಾ ಸಮೃದ್ಧ ವಿಶಾಲ ಗದ್ದೆಗಳನ್ನು ಗುತ್ತಿಗೆಗೆ ಪಡೆದು ಗರಿಷ್ಠ ಪ್ರಮಾಣದಲ್ಲಿ ರಾಸಾಯನಿಕ, ಕೀಟನಾಶಕಗಳನ್ನು ಬಳಸಿ ಭತ್ತ ಬೆಳೆಯುತ್ತಾರೆ. ಒಂದು ಲೆಕ್ಕದ ಪ್ರಕಾರ ಇಲ್ಲಿಂದ ಒಂದು ಸಾವಿರ ಲೋಡು ಭತ್ತ ಆಂಧ್ರಕ್ಕೆ ಹೋಗುವಾಗ ಇನ್ನೂರು–ಮುನ್ನೂರು ಲೋಡು ರಾಸಾಯನಿಕ ಗೊಬ್ಬರ ಇಲ್ಲಿಗೆ ಬರುತ್ತದೆ. ವಿಷದ ರಾಸಾಯನಿಕ ಕೀಟನಾಶಕಗಳನ್ನು ಮಾರುವ ನೂರಾರು ಅಂಗಡಿಗಳಿವೆ. ಆ ಅಂಗಡಿಗಳ ನಡುನಡುವೆಯೇ ಡಾಕ್ಟರ್ ಕ್ಲಿನಿಕ್‌ಗಳು, ಮೆಡಿಕಲ್ ಶಾಪ್‌ಗಳೂ ಇವೆ. ಬೆಳಕು ಹರಿಯುವ ಮುಂಚೆಯೇ ಆಸ್ಪತ್ರೆಗಳ ಮುಂದೆ ಟೋಕನ್ ಪಡೆದು ಕ್ಯೂ ನಿಲ್ಲುವವರು ಇದ್ದಾರೆ. ರಾಜ್ಯ–ರಾಷ್ಟ್ರೀಯ



**ಈ ಸಾವು ನ್ಯಾಯವೇ?**
ಅತಿಯಾದ ಕೀಟನಾಶಕ ಸಿಂಪಡಿಸಿದ ಬೆಳೆಯನ್ನು ತಿಂದು, ವಿಷಜಲ ಕುಡಿದು ಸಾವನ್ನಪ್ಪಿದ ಈ ಮುಗ್ಧಪಕ್ಷಿಗಳಲ್ಲಿ ನಮ್ಮ ನಾಳಿನ ಮರಣಮೃದಂಗವೂ ಕೇಳಿಸುತ್ತಿರುವಂತಿದೆ.